**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,**

**ಗುಂಡ್ಲುಪೇಟೆ**

**ಸಿ ಸಿ ನಂ. 433/2019**

ಫಿರ್ಯಾದುದಾರರು ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿತರು 1. ಹರ್ಷದ್ ಬಿನ್ ಮಹಮದ್ ಸಾಲಿ, 55 ವರ್ಷ
ಸುಬೈದ ಮಹಲ್, ಎಲಕಮಣ್ ಪೋಸ್ಟ್, ವರಕಲಾ,
ತ್ರಿವೇಂಡ್ರಂ ಜಿಲ್ಲೆ, ಕೇರಳ ರಾಜ್ಯ

2. ಮಧುಸೂದನ್ ಬಿನ್ ಭಾಸ್ಕರ್ ಪಣಿಕ್ಕರ್**(ಪ್ರತ್ಯೇಕಿಸಲ್ಪಟ್ಟಿದೆ)**
45 ವರ್ಷ, ಅಸ್ಟಾಲಜರ್ , ಪಚೇರಿ ಕಲೇರಿಕಲ್
ಹೌಸ್, ಪೆರಿಂದಲ್ ಮನ್ನಾ ತಾಲ್ಲೂಕು,
ಮಲ್ಲಪುರಂ ಜಿಲ್ಲೆ, ಕೇರಳ ರಾಜ್ಯ.

## ದೋಷಾರೋಪಣೆ

ಶ್ರೀ ಬಸವರಾಜ ತಳವಾರ. ಬಿಎ., ಎಲ್ ಎಲ್ ಬಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ಗಳು ಗುಂಡ್ಲುಪೇಟೆ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

ದಿನಾಂಕ 18.07.2019 ರಂದು ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಾಮರಾಜನಗರ ಮುಖ್ಯ ರಸ್ತೆ ಶಿವಾನಂದ ಸರ್ಕಲ್ ಬಳಿ ಬೆಳಗ್ಗೆ ಸುಮಾರು 11.15 ಗಂಟೆ ಸಮಯದಲ್ಲಿ 1ನೇ ಆರೋಪಿಯಾದ ನೀವು ಪ್ರತ್ಯೇಕಿಸಲ್ಪಟ್ಟ 2ನೇ ಆರೋಪಿಯ ಜೊತೆ ಸೇರಿ ನಿಮ್ಮ ಬಾಬ್ತು ಓಮಿನಿ ಕಾರು ನಂಃ ಕೆಎಲ್–08–ಎನ್–1888 ರಲ್ಲಿ ಸಾರ್ವಜನಿಕರಿಗೆ ವಿತರಣೆ ಮಾಡುವ ಸುಮಾರು 28 ಮೂಟೆ ಪಡಿತರ ಅಕ್ಕಿಯನ್ನು ಅದರ ತೂಕ 7 ಕ್ವಿಂಟಾಲ್ 87 ಕೆಜಿ ಅಕ್ಕಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಅನಧಿಕೃತವಾಗಿ ದಾಸ್ತಾನು ಮಾಡಿಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ತೆಗೆದುಕೊಂಡು ಹೋಗುತ್ತಿದ್ದಿರೆಂದು ಆ ಮೂಲಕ ಕಲಂ 3 ಮತ್ತು 7 ಅಗತ್ಯ ವಸ್ತುಗಳ ಅಧಿನಿಯಮ 1955 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಅಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ 01.08.2025

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ
ಗುಂಡ್ಲುಪೇಟೆ